## ಇನ್ನೂ ಹೆಚ್ಚು ಹೊತ್ತು ಬೇಕಿತ್ತು

ಚಂದನ ವಾಹಿನಿಯ ಶುಭೋದಯ ಕಾರ್ಯಕ್ರಮದಲ್ಲಿ ರಂಗಕರ್ಮಿ ಎಸ್.ಎನ್. ಸೇತುರಾಮ ಅವರ ಸಂದರ್ಶನ ಪ್ರಸಾರವಾಯಿತು. ಅವರು ಕನ್ನಡದ ಅನೇಕ ಧಾರಾವಾಹಿಗಳಲ್ಲಿ ನಟಿಸಿದ್ದಾರೆ. ನಟನೆ ಮತ್ತು ಸಂಭಾಷಣೆಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು. ಸಂದರ್ಶನದ ಸಂದರ್ಭದಲ್ಲಿ ಅವರ ಮಾತಿನ ಧಾಟಿ, ಶಬ್ದಗಳ ಬಳಕೆ, ವಿಷಯವನ್ನು ವಿಶ್ಲೇಷಿಸುವ ರೀತಿ ವೀಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿತು. ಅವರ ವಿಶಿಷ್ಟ ಶೈಲಿಯ ಮಾತುಗಾರಿಕೆ ಮನಸೆಳೆಯಿತು. ಪ್ರತಿ ಸಲವೂ ವಿಷಯವನ್ನು ಕೈಗೆತ್ತಿಕೊಂಡಾಗ ಅಂದರೆ ಅದು ನಾಟಕ ರಚನೆ ಇರಬಹುದು. ನಿರ್ದೇಶನ ಇರಬಹುದು, ಎಲ್ಲದರಲ್ಲೂ ತಮ್ಮ ಅನುಭವದ ತೂಕದ ಮಾತುಗಳನ್ನು ಆಡುತ್ತಲೇ ಹೋದರು.

ಎಲ್ಲವೂ ಅನುಭವದ ಮೂಸೆಯಲ್ಲಿ ಹೊರಹೊಮ್ಮಿದ ಚಿಂತನ ಪರವಾದ ಮಾತುಗಳು. ಇವುಗಳನ್ನು ಆಲಿಸುತ್ತ ವೀಕ್ಷಕರು ಚಿಂತನೆಗೆ ಒಳಗಾದದ್ದು ಅವರು ಮೋಡಿ ಮಾಡಿದಂತಿತ್ತು. ಅವರಿಗೆ ಕೊಟ್ಟ ಸಮಯ ಕೊಂಚ ಕಡಿಮೆಯಾಯಿತೇನೋ ಎನಿಸಿತು. ಕನ್ನಡ ನಾಡಿನ ವೀಕ್ಷಕರಿಗೆ, ಯುವ ಜನರಿಗೆ, ವಿದ್ಯಾರ್ಥಿಗಳಿಗೆ ತುಂಬಾ ಪ್ರೇರಕವಾದ ಇಂತಹ ಕಾರ್ಯಕ್ರಮಗಳು ಇನ್ನಷ್ಟು ಮೂಡಿಬರಲಿ ಎಂದು ಆಶಿಸುತ್ತೇನೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಸರಿ ಗನ್ನಡಂಗೆಲ್ಗೆ!

ದೂರದರ್ಶನದಲ್ಲಿ ಇತ್ತೀಚೆಗೆ ಪ್ರಸಾರವಾಗುವ ಧಾರಾವಾಹಿಗಳು. ಕಾಮಿಡಿ ಕಿಲಾಡಿಗಳು, ಸುದ್ದಿ ವಾಹಿನಿಗಳು, ಜನರಿಗೆ ಮೋಡಿ ಮಾಡುವ ತಂತ್ರವಾಗಿದೆ. ಇಲ್ಲಿ ಕನ್ನಡದ ಬಳಕೆ ಕ್ಷೀಣಿಸಿ ಕಂಗ್ಲೀಷಾಗುತ್ತಿದೆ. ನೋವಿನ ಸಂಗತಿಯೆಂದರೆ ಕನ್ನಡದ ನಟ ಮಣಿಗಳು ಕನ್ನಡ ಬಿಟ್ಟು ವೈಯ್ಯಾರದಿಂದ ಇಂಗ್ಲಿಷ್‌ನಲ್ಲಿ ಉಲಿಯುವುದನ್ನು ಕಂಡರೆ ಹೊಟ್ಟೆಯುರಿಯುತ್ತದೆ. ನೊಂದ ಕನ್ನಡದ ಮನಸುಗಳಿಗೆ ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುವ ಧಾರಾವಾಹಿಯೊಂದು ತಂಪೆರೆಯುವ ಆಶಾಕಿರಣ. ಕನ್ನಡತಿ ಧಾರಾವಾಹಿಯಲ್ಲಿ ಸಂಚಿಕೆಯ ಕೊನೆಗೆ ನಾಯಕಿ ಬಿತ್ತರಿಸುವ ಸರಿ ಗನ್ನಡಂಗೆಲ್ಗೆ. ಕನ್ನಡ ಭಾಷೆಯನ್ನು ಬರೆಯುವಾಗ ಉಂಟಾಗುವ ಸಾಮಾನ್ಯ ತೊಂದರೆಗಳನ್ನು ಚರ್ಚಿಸುತ್ತಿರುವುದು ವಿದ್ಯಾರ್ಥಿಗಳಿಗೆ, ಸಾಹಿತ್ಯಾಸಕ್ತರಿಗೆ ಮತ್ತು ಕನ್ನಡ ಪ್ರೇಮಿಗಳಿಗೆ ರಸದೌತಣವೆನ್ನಬಹುದು, ಆರೋಗ್ಯಕರ ಸಂದೇಶವನ್ನು ಹೀಗೂ ತಲುಪಿಸಬಹುದು ಎಂಬ ಇಂಥ ಪ್ರಯತ್ನಕ್ಕೆ ವಂದನೆಗಳು.

—ಪ್ರಕಾಶ ಎಸ್.ಮನ್ನಂಗಿ, ಮೋಟೆಬೆನ್ನೂರು.

## ಹಿತವಾದ ಬದಲಾವಣೆ

ಕಿರುತೆರೆಯಲ್ಲಿ ಸುದ್ದಿ ಮಾಡುತ್ತಿರುವ ಝೀ ಕನ್ನಡದ 'ಜೊತೆ ಜೊತೆಯಲಿ' ಹಲವಾರು ವಿಚಾರಗಳಲ್ಲಿ ವಿಭಿನ್ನವಾಗಿ ನಿಲ್ಲುತ್ತದೆ. ಇದರ ಕಥಾ ಹಂದರದ ಜೊತೆ ಜೊತೆಗೇ, ತ್ಯಾಜ್ಯ ನಿರ್ವಹಣೆ, ಕಾರ್ಮಿಕರ ಹಿತ, ಮೊಬೈಲ್ ಬಳಕೆಯ ನಿಯಂತ್ರಣ ಹೀಗೆ ಹಲವಾರು ಸಾಮಾಜಿಕ ಕಳಕಳಿಯ ಅಂಶಗಳ ಬಗ್ಗೆ ಅರಿವು ಮೂಡಿಸುವ ಸನ್ನಿವೇಶಗಳನ್ನು ಕಥೆಗೆ ಪೂರಕವಾಗಿ ಬಳಸಿಕೊಳ್ಳಲಾಗುತ್ತಿದೆ.

ಋಣಾತ್ಮಕತೆಯನ್ನು ಪ್ರಚೋದಿಸುವ ದೃಶ್ಯಗಳೇ ಧಾರಾವಾಹಿಯ ಬಂಡವಾಳವಾಗಿರುವಾಗ, ಅದಕ್ಕೆ ವ್ಯತಿರಿಕ್ತವಾದ ಈ ಬದಲಾವಣೆ ಚೇತೋಹಾರಿಯಾಗಿದೆ. ಇದರ ಇನ್ನೊಂದು ವಿಶಿಷ್ಟ ಸಂಗತಿಯೆಂದರೆ ಸಂಭಾಷಣೆ. ಧಾರಾವಾಹಿ ಸಂಭಾಷಣೆಗಳೆಂದರೆ ದ್ವಂದ್ವಾರ್ಥ, ಕಿರುಚಾಟ, ಅತಾರ್ಕಿಕ ಮಾತುಗಳು ಹಾಗೂ ಕಂಗ್ಲೀಷ್‌ಮಯ ಎಂಬ ಅಭಿಪ್ರಾಯವಿದೆ. ಇಲ್ಲಿ ಅಪರೂಪದ, ಹೆಚ್ಚಾಗಿ ಬಳಕೆಯಲ್ಲಿರದ ಹಳೆಯ ಅರ್ಥಪೂರ್ಣ ನಾಣ್ನುಡಿಗಳನ್ನು ಔಚಿತ್ಯಪೂರ್ಣವಾಗಿ ಬಳಸಿಕೊಳ್ಳಲಾಗುತ್ತಿದೆ. ಕಥೆಯ ಸಂದರ್ಭಕ್ಕೆ ಸೂಕ್ತವಾಗಿ ಹೊಂದಾಣಿಕೆಯಾಗುವಂತೆ ಅವುಗಳನ್ನು ತನ್ನ ಪಾತ್ರವೊಂದರ ಮೂಲಕ ಹೇಳಿಸುವ ಸಂಭಾಷಣಾ ತಂತ್ರ ಪ್ರಶಂಸನೀಯ. ಆ ಮೂಲಕ ಹಳೆಯ ನಾಣ್ನುಡಿಗಳು ಪ್ರೇಕ್ಷಕರನ್ನು ತಲುಪಿದಂತೆಯೂ ಆಗುತ್ತದೆ ಮತ್ತು ಸಂಭಾಷಣೆಯೂ ವಿಶಿಷ್ಟ ಎನಿಸಿಕೊಳ್ಳುತ್ತದೆ.

—ಸಂದೇಶ್ ಎಚ್. ನಾಯ್ಕ್ ಹಕ್ಲಾಡಿ, ಕುಂದಾಪುರ

ವಾರದ ಪತ್ರ

## ಉತ್ತಮ ಪ್ರಯತ್ನ

ನೈಜ ಬದುಕಿಗೆ ಭಿನ್ನವಾದ ಕಥೆ, ಮನೆಹಾಳು ಮಾಡುವುದು ಹೇಗೆ ಎನ್ನುವುದನ್ನೇ ವೈಭವೀಕರಿಸುವ, ಅವಾಸ್ತವಿಕತೆಯ ಚಿತ್ರಣಕ್ಕೆ ಹೆಚ್ಚು ಒತ್ತು ಕೊಡುತ್ತಿರುವ ಧಾರಾವಾಹಿಗಳಿಗಿಂತ ಕಲರ್ಸ್ ಕನ್ನಡದ 'ಕನ್ನಡತಿ' ಭಿನ್ನವಾಗಿದೆ. ಕಥೆ ಹೇಗೇ ಇರಲಿ ಕಡೆಯಲ್ಲಿ ಬರುವ ಕನ್ನಡ ಭಾಷಾ ಕಲಿಕೆಯ ವಿಧಾನವೂ ಉತ್ತಮ ಪ್ರಯತ್ನ. 'ಹಾರ್ಧಿಕ ಶುಭಾಶಯಗಳು, ಮಧ್ಯಪಾನ, ಪ್ರಮಾಣಿಕವಾಗಿ' ಹೀಗೆಲ್ಲಾ ತಪ್ಪು ತಪ್ಪಾಗಿ ಕನ್ನಡವನ್ನು ಪರದೆಯ ಮೇಲೆ ತೋರಿಸುತ್ತಿರುವ ಕನ್ನಡದ ಸುದ್ದಿ ವಾಹಿನಿಗಳೂ ಕನ್ನಡತಿಯಿಂದ ಕಲಿಯಬೇಕಾದ್ದು ಬಹಳಷ್ಟಿದೆ.

ಕಲಿಕೆಯಲ್ಲಿ ಮುಂದಿದ್ದರೂ ಇಂಗ್ಲಿಷ್ ಮಾತನಾಡುತ್ತಿಲ್ಲ ಎಂಬ ಕಾರಣಕ್ಕೆ ವಿದ್ಯಾರ್ಥಿಗಳಿಗೆ ಶಿಕ್ಷೆ ಕೊಡುವುದು ಒಂದು ರೀತಿಯ ಶೋಷಣೆಯೇ ಸರಿ. ಗ್ರಾಮೀಣ ಶಾಲೆಯ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಒಂದು ಹುಡುಗಿ ಇಂಗ್ಲಿಷ್ ಮಾಧ್ಯಮಕ್ಕೆ ಹೋದಾಗ, ಇಂಗ್ಲಿಷ್ ಮಾತನಾಡಲು ಬರುವುದಿಲ್ಲವೆಂದು ಸ್ನೇಹಿತರು, ಅಧ್ಯಾಪಕರನ್ನು ಒಳಗೊಂಡು ಎಲ್ಲರಿಂದ ಅವಮಾನಿತಳಾಗಿ, ಪ್ರತಿದಿನ ತನಗೆ ಹೊಟ್ಟೆ ನೋವು ಶಾಲೆಗೆ ಹೋಗುವುದಿಲ್ಲ ಎಂದು ಅಳುತ್ತಿರುತ್ತಾಳೆ. ನಿಜವಾದ ಕಾರಣ ತಾಯಿಗೆ ಗೊತ್ತಾಗಿ ಅವಳನ್ನು ಬೇರೆ ಶಾಲೆಗೆ ಸೇರಿಸುತ್ತಾರೆ. ಆ ಹುಡುಗಿ ಇಂದು ಪ್ರತಿಷ್ಠಿತ ಬ್ಯಾಂಕ್ ಒಂದರ ಮ್ಯಾನೇಜರ್ ಆಗಿ, ಇತ್ತೀಚೆಗೆ ವಿದೇಶಕ್ಕೂ ಹೋಗಿ ಬಂದಿದ್ದಾಳೆ. ಇದೊಂದು ನೈಜ ಘಟನೆ. ಇನ್ನಾದರೂ ಕನ್ನಡ ಮಾಧ್ಯಮದವರ ಮೇಲೆ ದಬ್ಬಾಳಿಕೆ ಮಾಡಬಾರದು ಎಂಬುದನ್ನು ಆಂಗ್ಲ ಮಾಧ್ಯಮ ಶಾಲೆಯವರು ಕಲಿತುಕೊಳ್ಳಬೇಕು.

—ಪುಷ್ಪ ಎನ್.ಕೆ., ರಾವ್

## ಧೂಮಪಾನ ನಿಲ್ಲಲಿ

ಕಲರ್ಸ್ ಕನ್ನಡದ 'ಕನ್ನಡತಿ' ಚೆನ್ನಾಗಿ ಮೂಡಿ ಬರುತ್ತಿದೆ. ಪ್ರತಿ ಕಂತಿನ ಕೊನೆಗೆ ಒಂದು ಕನ್ನಡ ಪದದ ಸರಿಯಾದ ರೂಪ, ಉಚ್ಚಾರಣೆ ಹೇಳಿಕೊಡುವುದು ನಿವೃತ್ತನಾಗಿರುವ ನಾನೂ ಕೂಡ ಆಸಕ್ತಿಯಿಂದ ಗಮನಿಸಿ, ನನ್ನ ಕನ್ನಡದಲ್ಲಿ ಆಗುವ ತಪ್ಪುಗಳನ್ನು ತಿದ್ದಿಕೊಳ್ಳುತ್ತೇನೆ. ನಿಜಕ್ಕೂ ಇದೊಂದು ಶ್ಲಾಘನೀಯ ಪ್ರಯತ್ನ. ಸರಿಗನ್ನಡಂ ಗೆಲ್ಗೆ. ಈ ಧಾರಾವಾಹಿಯಲ್ಲಿ ನಾಯಕ, ನಾಯಕಿಯ ತಂದೆ ಸಿಗರೇಟು ಸೇದುವುದು ಯಾಕೋ ಸರಿ ಬರಲಿಲ್ಲ. ಸಮಾಜಕ್ಕೆ ತಪ್ಪು ಸಂದೇಶ ಹೋಗುತ್ತದೆ.

—ಶಾಂತವೀರ ಎಸ್., ಚಿತ್ರದುರ್ಗ

## ಟೀಕೆ ಸ್ವಾಗತಾರ್ಹ ಆದರೂ...

ಕಲರ್ಸ್ ಕನ್ನಡದ 'ಮಗಳು ಜಾನಕಿ'ಯಲ್ಲಿ ಖಳನಾಯಕಿಯರು, ಅತ್ತೆ, ಸೊಸೆಯರ ನಡುವಿನ ದ್ವೇಷದ ಕಲಹ ಇಲ್ಲ. ಅತ್ತೆ, ಸೊಸೆಯರ ಅನ್ಯೋನತೆ, ಮಮತೆಯ ಕಾರಣಕ್ಕೆ ಈ ಕಥೆ ಮಾದರಿಯಾಗಿದೆ.

ಕೆಲವು ದೋಷಗಳಿದ್ದಾಗ್ಯೂ ಬೇರೆ ಧಾರಾವಾಹಿಗಳಂತೆ ನಿಂತ ನೀರಾಗಿರದೆ, ತಲೆ ಚಿಟ್ಟು ಹಿಡಿಸದೆ ವಿಭಿನ್ನವಾಗಿದ್ದು ಕುತೂಹಲವನ್ನು ಕಾಯ್ದುಕೊಂಡಿದೆ.

—ಶ್ರೀಧರ, ಬೆಂಗಳೂರು

## ಹೆಸರು ಬದಲಾಗಲಿ

'ಮಗಳು ಜಾನಕಿ'ಯಲ್ಲಿ ಪ್ರತಿಯೊಬ್ಬರಿಗೂ ಸಂಕಷ್ಟಗಳ ಸರಮಾಲೆ. ಒಬ್ಬರೂ ನೆಮ್ಮದಿಯಲ್ಲಿ ಬದುಕುತ್ತಿಲ್ಲ. ಒಂದು ಸಂಕಷ್ಟದಿಂದ ತಪ್ಪಿಸಿಕೊಳ್ಳುತ್ತಿರುವಂತೆ ಇನ್ನೊಂದು ಸಂಕಟ ಬಂದೆರಗುತ್ತದೆ. ಹೊಸ ಪಾತ್ರಗಳು ಬರುವಾಗ ಸಮಸ್ಯೆಗಳ ಮೂಟೆಯನ್ನು ತರುತ್ತಾರೆ. ಜಾನಕಿ– ನಿರಂಜನರಿಗೆ ಕಾಡುತ್ತಿದ್ದ ಸಂಕಷ್ಟ ಎಲ್ಲರನ್ನೂ ಆವರಿಸಿದ್ದರಿಂದ 'ಸಂಕಷ್ಟ ಸುನಾಮಿ' ಎಂದು ನಾಮಕರಣ ಮಾಡಿದರೆ ಚೆನ್ನಾಗಿರುತ್ತಿತ್ತೇನೋ ಎಂದು ಭಾವಿಸುವಂತಾಗಿದೆ.

—ರಮಾನಂದ ಶರ್ಮಾ, ನವದೆಹಲಿ